# ಕಥೆಯನ್ನು ಕೇಳಿಯೇ ಪಾತ್ರ ಒಪ್ಪುತ್ತೇನೆ

**ಶಿಲ್ಪಾ ಕಾಮತ್**
ಕಲರ್ಸ್ ಕನ್ನಡ 'ಗೌರಿ ಕಲ್ಯಾಣ'ದ ಗೌರಿ

■ ರಾಘವೇಂದ್ರ ಕೆ.

◆ **ಬೆಂಗಳೂರಿಗೆ ಬಂದ ದಿನಗಳು ಹೇಗಿದ್ದವು?**

ಮಂಗಳೂರು ಮೂಲ. ಸೀರಿಯಲ್ ಸಂಬಂಧ ಬೆಂಗಳೂರಿಗೆ ಬರಬೇಕಾಯಿತು. ಇಲ್ಲಿಗೆ ಬರುವೆ ಎಂದು ನಿರೀಕ್ಷೆ ಮಾಡಿರಲಿಲ್ಲ. ಮಂಗಳೂರಿನಲ್ಲೇ ಕೆಲಸ ಮಾಡಬೇಕು ಎನ್ನುವ ಉದ್ದೇಶ ಇತ್ತು. ಅದರಲ್ಲೂ ಪೋಷಕರನ್ನು ಬಿಟ್ಟು ಒಲ್ಲದ ಮನಸಿನಿಂದಲೇ ಬಂದಿದ್ದೆ. ಆರಂಭದಲ್ಲಿ ಕಷ್ಟ ಎಂದೆನಿಸಿತು. ಸೀರಿಯಲ್ ಕೆಲಸಗಳ ಒತ್ತಡ ಇರುವುದರಿಂದ ತಕ್ಷಣ ಊರಿಗೆ ಹೋಗಲು ಆಗುತ್ತಿರಲಿಲ್ಲ. ನಿಧಾನಕ್ಕೆ ಇಲ್ಲಿನ ವಾತಾವರಣಕ್ಕೆ ಹೊಂದಿಕೊಂಡೆ. ಊಟೋಪಚಾರವೂ ಭಿನ್ನ ಎಂದೆನಿಸುತ್ತಿತ್ತು. ಅದೂ ಹೊಂದಾಣಿಕೆ ಮಾಡಿಕೊಳ್ಳಲು ಸ್ವಲ್ಪ ಸಮಯ ಹಿಡಿಯಿತು. ಈಗ ಅಂತಹ ತೊಂದರೆಗಳೇನೂ ಇಲ್ಲ.

◆ **ಬಾಲ್ಯದಲ್ಲಿ ನಿಮ್ಮ ಕನಸು ಏನಾಗಿತ್ತು?**

ಚಿಕ್ಕ ವಯಸ್ಸಿನಲ್ಲಿ ಇದೇ ಆಗಬೇಕು ಎನ್ನುವ ನಿರ್ದಿಷ್ಟ ಗುರಿ ಇರಲಿಲ್ಲ. ಸಂಚಾರಿ ಭಾವದಲ್ಲಿ ಅದು ಆಗಾಗ ಬದಲಾಗುತ್ತಿತ್ತು. ಸ್ವಲ್ಪ ದೊಡ್ಡವಳಾಗುತ್ತಿದ್ದಂತೆ ನಟಿ ಆಗಬೇಕು ಎನ್ನುವ ಆಸೆ ಹುಟ್ಟಿತು. ನನಸಾಗುತ್ತದೆಯೋ ಇಲ್ಲವೋ ಗೊತ್ತಿರಲಿಲ್ಲ. ಪೋಷಕರು ನನ್ನಾಸೆ ಸ್ಪಂದಿಸುತ್ತಾರೋ ಇಲ್ಲವೋ ಗೊತ್ತಿರಲಿಲ್ಲ. ಅಂತಹ ಕನಸಿನ ಬಗ್ಗೆ ಯೋಚನೆಯನ್ನೂ ಮಾಡಲಿಲ್ಲ. ಓದು ಮುಗಿಸಿದ ಬಳಿಕ ಒಂದು ಐಟಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ. ಅದೇ ನನ್ನ ಉದ್ಯೋಗ ಎನ್ನುವುದು ಮಾತ್ರ ನಿಶ್ಚಿತವಾಗಿತ್ತು. ಈಗ ಅದನ್ನು ಬಿಟ್ಟು ನಟನೆಯತ್ತ ಬರುವಂತಾಯಿತು.

◆ **ಅಭಿನಯವನ್ನು ರೂಢಿಸಿಕೊಂಡಿದ್ದು ಹೇಗೆ?**

ನಟನೆಯನ್ನು ತರಗತಿಗೆ ಹೋಗಿ ಎಂದೂ ಕಲಿಯಲಿಲ್ಲ. ನಟಿಯಾದ ನಂತರ ಕಾರ್ಯಾಗಾರದಲ್ಲಿ ಒಂದು ವಾರ ಭಾಗವಹಿಸಿದ್ದೆ. ಅಲ್ಲಿ ಭವಾನಿ ಪ್ರಕಾಶ್ ಅಭಿನಯದ ಬಗ್ಗೆ ಕೆಲವು ಸೂಕ್ಷ್ಮ ಕೌಶಲ್ಯವನ್ನು ಹೇಗೆ ರೂಢಿಸಿಕೊಳ್ಳಬೇಕು ಎನ್ನುವ ಸಲಹೆ ಹೇಳಿಕೊಟ್ಟರು. ನಟನೆಯನ್ನು ಯಾರೂ ಕಲಿಸಿಕೊಡಲು ಬರುವುದಿಲ್ಲ ಎನ್ನುವ ಭಾವನೆ ನನ್ನದು. ಅದು ವ್ಯಕ್ತಿಯಲ್ಲಿ ಸಹಜವಾಗಿ ಮೂಡಬೇಕಾದ ಪ್ರತಿಭೆ. ಕೆಲವು ತಂತ್ರಗಳನ್ನು ಮಾತ್ರ ತಿಳಿಸಿಕೊಡಬಹುದು. ಇಲ್ಲವೇ ಸಂದರ್ಭಗಳನ್ನು ಹೇಗೆ ನಿಭಾಯಿಸಬಹುದು ಎನ್ನುವುದನ್ನು ತಿಳಿಸಬಹುದು. ಸಹಜವಾಗಿ ಇದನ್ನು ಮೈಗೂಡಿಸಿಕೊಂಡು ಕಲಿಯುತ್ತಿದ್ದೇನೆ.

◆ **ಗೌರಿ ಪಾತ್ರ ಹೇಗಿದೆ?**

ಪೌರಾಣಿಕ ಪಾತ್ರ. ಈ ಕಥೆಯನ್ನು ಕೇಳಿದಾಗ ತುಂಬ ಖುಷಿ ಆಯಿತು. ಅವಕಾಶವೂ ನನ್ನನ್ನೇ ಹುಡುಕಿ ಬಂದಿದೆ. ಆ ದೃಷ್ಟಿಯಲ್ಲಿ ತಂಡಕ್ಕೆ ಕೃತಜ್ಞತೆಯನ್ನು ಹೇಳುತ್ತೇನೆ. ಧಾರಾವಾಹಿಗೂ ಅನೇಕ ಏರಿಳಿತಗಳಿವೆ. ಕಥೆ ಸರಳ ರೇಖೆಯಂತೆ ಸಾಗುವುದಿಲ್ಲ. ಅಮ್ಮನ ಮನೆಯಲ್ಲಿ ಖುಷಿಯಾಗಿಯೇ ಇರುತ್ತೇನೆ. ಗಂಡನ ಮನೆಗೆ ಹೋದ ನಂತರ ಅಲ್ಲಿ ಕಾಮಿಡಿ ಜೊತೆ ರೊಮ್ಯಾಂಟಿಕ್ ದೃಶ್ಯಗಳು ಇವೆ. ಇದು ಹಲವು ಅನುಭವಗಳನ್ನು ನೀಡುತ್ತಿದೆ.

◆ **ಆಡಿಷನಿಗೆ ಹೇಗೆ ಸಿದ್ಧತೆಯನ್ನು ಮಾಡಿಕೊಳ್ಳುತ್ತೀರಿ?**

ಇದು ನನಗೆ ಎರಡನೇ ಸೀರಿಯಲ್. ತುಂಬ ಆಡಿಷನ್ ಕೊಟ್ಟಿಲ್ಲ. ಈ ಪಾತ್ರಕ್ಕೆ ಆಡಿಷನ್ ನೀಡುವ ಸಂದರ್ಭದಲ್ಲಿಯೂ ಹೇಗೆ ಎನ್ನುವುದು ಗೊತ್ತಿರಲಿಲ್ಲ. ಆ ಸ್ಥಳಕ್ಕೆ ಹೋದ ನಂತರವೇ ಇಂತಹ ಪಾತ್ರಕ್ಕೆ ಇಂತಹ ಸನ್ನಿವೇಶವನ್ನು ಮಾಡಿ ತೋರಿಸಿ ಎಂದು ಹೇಳಿದರು. ಅದಕ್ಕೆ ಒಂದು ಸ್ಕ್ರಿಪ್ಟ್ ಕೊಟ್ಟರು. ಅದನ್ನು ಓದಿದ ನಂತರವೇ ಯೋಚಿಸಿ ನಟನೆ ಮಾಡಬೇಕಾಯಿತು. ಹಾಗಾಗಿ ಅದಕ್ಕೂ ಮೊದಲು ಸಿದ್ಧತೆ ಮಾಡಲು ಆಗುವುದಿಲ್ಲ. ಈಗ ಪಾತ್ರದ ಬಗ್ಗೆ ಗೊತ್ತಾಗಿದೆ. ಇದರ ಅಗತ್ಯಕ್ಕೆ ಅನುಗುಣವಾಗಿ ಸುಧಾರಣೆಯನ್ನು ಮಾಡಿಕೊಳ್ಳಬಹುದು.

◆ **ಮುಂದಿನ ದಾರಿ ಬಗ್ಗೆ ಏನು ಯೋಚಿಸಿದ್ದೀರಿ?**

ಗೌರಿ ಪಾತ್ರವನ್ನು ಮಾಡುವ ಮೊದಲೇ 'ರಂಗಸ್ಥಳ' ಸಿನಿಮಾದಲ್ಲಿ ಕೆಲಸ ಆರಂಭಿಸಿದ್ದೆ. ಮೊದಲ ಹಂತದ ಚಿತ್ರೀಕರಣ ಮುಗಿದಿದೆ. ಯಾವುದೇ ಪಾತ್ರವನ್ನು ಆಯ್ಕೆ ಮಾಡಿಕೊಂಡರೂ ಅದಕ್ಕೆ ಕಥೆಯೇ ಜೀವಾಳ. ಕಥೆ ಕೇಳಿಯೇ ಪಾತ್ರವನ್ನು ಒಪ್ಪಿಕೊಳ್ಳುತ್ತೇನೆ. ಯಾವುದೇ ಪಾತ್ರಕ್ಕಾದರೂ ಅಂತಿಮ ನಿರ್ಣಯವನ್ನು ನಾನೇ ತೆಗೆದುಕೊಳ್ಳುತ್ತೇನೆ. ಆದರೂ ಕಥೆಯನ್ನು ಕೇಳುವಾಗ ಅಮ್ಮ ನನ್ನ ಜೊತೆ ಇರಬೇಕು. ಅವರಿಗೂ ಗೊತ್ತಾಗಲಿ ಎನ್ನುವ ದೃಷ್ಟಿಯಲ್ಲಿ ಕರೆದುಕೊಂಡು ಹೋಗಿರುತ್ತೇನೆ. ಸಾಮಾನ್ಯವಾಗಿ ಕಥೆಯ ಬಗ್ಗೆ ಬೇರೆಯವರ ಜೊತೆ ಚರ್ಚೆ ಮಾಡಲು ಹೋಗುವುದಿಲ್ಲ.

◆ **ಖಳನಾಯಕಿ ಪಾತ್ರ ಬಂದರೆ...**

ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಪಾಸಿಟಿವ್ ಪಾತ್ರವನ್ನೇ ಮಾಡುತ್ತಿದ್ದವಳಿಗೆ ಒಂದು ಬದಲಾವಣೆ ಆಗಬಹುದು. ಸಾಮಾನ್ಯವಾಗಿ ನನಗೆ ನೆಗೆಟಿವ್ ಪಾತ್ರಕ್ಕೆ ಅವಕಾಶ ಬರುವುದಿಲ್ಲ ಎಂದುಕೊಂಡಿದ್ದೇನೆ. ಬಂದರೆ ಖಂಡಿತ ಮಾಡುತ್ತೇನೆ. ತೀರಾ ದುಷ್ಟ ಗುಣದ ಪಾತ್ರವನ್ನು ಒಪ್ಪುವುದಿಲ್ಲ. ಭಿನ್ನತೆಯ ಕಾರಣಕ್ಕೆ ಅಂತಹ ಪಾತ್ರವನ್ನೂ ಮಾಡುವ ಉದ್ದೇಶ ಇದೆ. ■

